ಪರಿಸ್ಕಾರಶೀಲ

UIS
14/9/2021

# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 345
ಸದಸ್ಯರ ಹೆಸರು : ಶ್ರೀ ಕೆ.ಟಿ. ಶ್ರೀಕಂಠೇಗೌಡ
ಉತ್ತರಿಸುವ ದಿನಾಂಕ : 14/09/2021
ಉತ್ತರಿಸುವ ಸಚಿವರು : ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಪೌರಾಡಳಿತ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯದಲ್ಲಿರುವ ಸ್ಥಳೀಯ ಸಂಸ್ಥೆಗಳ ಸಂಖ್ಯೆ ಎಷ್ಟು; ಅವು ಯಾವುವು (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿರುವ ಸ್ಥಳೀಯ ಸಂಸ್ಥೆಗಳ ಜಿಲ್ಲಾವಾರು ಮಾಹಿತಿಯನ್ನು **ಅನುಬಂಧ-1ರಲ್ಲಿ** ನೀಡಿದೆ. |
| (ಆ) | ಇಲಾಖೆಯು ನಿವೇಶನ, ಮನೆ, ಮತ್ತು ಕಟ್ಟಡಗಳಿಗೆ ಆಸ್ತಿಯ ಮಾರ್ಗಸೂಚಿ ಬೆಲೆಯ ಆಧಾರದ ಮೇಲೆ ಕಂದಾಯ ನಿಗದಿಪಡಿಸಿರುವುದು ಸರಿಯೇ; (ಆದೇಶದ ಪ್ರತಿ ಒದಗಿಸುವುದು) | ಹೌದು.<br>ಕರ್ನಾಟಕ ಪುರಸಭೆಗಳ ಅಧಿನಿಯಮ 1964, ಕಲಂ 102 ಹಾಗೂ ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976 ಕಲಂ 109 ತಿದ್ದುಪಡಿಯಂತೆ ಸ್ವತ್ತು ತೆರಿಗೆ ನಿರ್ಧರಣೆಯನ್ನು ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ 1957ರ 45ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಚಾಲ್ತಿ ಸಾಲಿನ ಸ್ವತ್ತಿನ ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡು ತೆರಿಗೆ ನಿರ್ಧರಣೆ ಮಾಡಲಾಗುತ್ತಿದೆ.<br>DPAL 07 SHASANA 2021, BENGALURU, DATED 18-02-2021 ಹಾಗೂ DPAL 06 SHASANA 2021, BENGALURU, DATED 18-02-2021 ರ ಪ್ರತಿಗಳನ್ನು **ಅನುಬಂಧ-2ರಲ್ಲಿ** ನೀಡಿದೆ. |
| (ಇ) | ಇದರಿಂದ ಕಂದಾಯ 100% ಯಿಂದ 400% ಹೆಚ್ಚಾಗಿರುವುದರಿಂದ ಜನರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಆಸ್ತಿ ತೆರಿಗೆಯು ಶೇ. 100% ಯಿಂದ ಶೇ. 400% ಹೆಚ್ಚಾಗಿರುವ ನಿರ್ದಿಷ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. |
| (ಈ) | ಕೋವಿಡ್-19ರ ಸಮಯದಲ್ಲಿ ಸರ್ಕಾರ ನಿವೇಶನ/ಆಸ್ತಿಗಳ ಕಂದಾಯವನ್ನು (ಮನಸೋ ಇಚ್ಛೆ) ಜಾಸ್ತಿ ಮಾಡಿರುವುದು ಸರಿಯೇ; | ಕರ್ನಾಟಕ ರಾಜ್ಯವು ಜಿ.ಎಸ್.ಡಿ.ಪಿ ಯ ಶೇ. 0.25ರಷ್ಟು ಹೆಚ್ಚುವರಿ ಹಣ ಸಾಲ ಪಡೆಯಲು ಮತ್ತು 15ನೇ ಹಣಕಾಸು ಆಯೋಗದ ಅನುದಾನ ಪಡೆಯುವ ನಿಟ್ಟಿನಲ್ಲಿ ಅರ್ಹರಾಗಲು ಮತ್ತು ನಗರ ಸ್ಥಳೀಯ ಸಂಸ್ಥೆಗಳು ಆರ್ಥಿಕವಾಗಿ ಸದೃಢಗೊಳಿಸುವ ಚಾಲ್ತಿ ಸಾಲಿನ ಮಾರ್ಗಸೂಚಿ ಬೆಲೆಗಳನ್ನಾಧರಿಸಿ DPAL 07 SHASANA 2021, BENGALURU, DATED 18-02-2021 ಹಾಗೂ DPAL 06 SHASANA 2021, BENGALURU, DATED 18-02-2021 ರನ್ವಯ ಸಂಬಂಧಿಸಿದ ಕಾಯ್ದೆಗಳಿಗೆ ತಿದ್ದುಪಡಿ ಮಾಡಲಾಗಿರುತ್ತದೆ. |

ಸಂಖ್ಯೆ: ನಅಇ/26/ಎಲ್‌ಸಿಕ್ಯೂ/2021

N. Nagaraju
**(ಎನ್. ನಾಗರಾಜು ಎಂ ಟಿ ಬಿ)**
ಮಾನ್ಯ ಪೌರಾಡಳಿತ, ಸಣ್ಣ ಕೈಗಾರಿಕೆಗಳು ಹಾಗೂ ಸಾರ್ವಜನಿಕ ವಲಯ ಉದ್ಯಮಗಳ ಸಚಿವರು.

ಅನುಬಂಧ - 1

## ರಾಜ್ಯದ ಎಲ್ಲಾ ಮಹಾನಗರಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳ ಪಟ್ಟಿ

| ಕ್ರ.ಸಂ. | ಜಿಲ್ಲೆಯ ಹೆಸರು | ಮಹಾನಗರಪಾಲಿಕೆ | ನಗರಸಭೆ | ಪುರಸಭೆ | ಪಟ್ಟಣ ಪಂಚಾಯಿತಿ |
|---|---|---|---|---|---|
| 1 | ಬೆಂಗಳೂರು ನಗರ | | ಹೆಬ್ಬಗೋಡಿ | ಆನೇಕಲ್ | ದೊಡ್ಡತೋಗೂರು |
| | | | ಮಾದನಾಯಕನಹಳ್ಳಿ | ಬೊಮ್ಮಸಂದ್ರ | |
| | | | | ಜಿಗಣಿ | |
| | | | | ಚಂದಾಪುರ | |
| | | | | ಅತ್ತೀಬೆಲೆ | |
| | | | | ಕೋನಪ್ಪನ ಅಗ್ರಹಾರ | |
| | | | | ಹುಣಸಮಾರನಹಳ್ಳಿ | |
| | | | | ಚಿಕ್ಕಬಾಣಾವರ | |
| | 11 | | 2 | 8 | 1 |
| | | | | | |
| 2 | ಬೆಂಗಳೂರು ಗ್ರಾಮಾಂತರ | | ದೊಡ್ಡಬಳ್ಳಾಪುರ | ದೇವನಹಳ್ಳಿ | ಬಾಶೆಟ್ಟಿಹಳ್ಳಿ |
| | | | ಹೊಸಕೋಟೆ | ವಿಜಯಪುರ | |
| | | | ನೆಲಮಂಗಲ | | |
| | 6 | 0 | 3 | 2 | 1 |
| | | | | | |
| 3 | ರಾಮನಗರ | | ರಾಮನಗರ | ಮಾಗಡಿ | ಹಾರೋಹಳ್ಳಿ |
| | | | ಚನ್ನಪಟ್ಟಣ | ಬಿಡದಿ | |
| | | | ಕನಕಪುರ | | |
| | 6 | 0 | 3 | 2 | 1 |
| | | | | | |
| 4 | ತುಮಕೂರು | ತುಮಕೂರು | ತಿಪಟೂರು | ಕುಣಿಗಲ್ | ಕೊರಟಗೆರೆ |
| | | | ಶಿರಾ | ಚಿ.ನಾ.ಹಳ್ಳಿ | ಗುಬ್ಬಿ |
| | | | | ಮಧುಗಿರಿ | ತುರುವೇಕೆರೆ |
| | | | | ಪಾವಗಡ | ಹುಳಿಯಾರು |
| | 11 | 1 | 2 | 4 | 4 |
| | | | | | |
| 5 | ಕೋಲಾರ | | ಕೋಲಾರ | ಬಂಗಾರಪೇಟೆ | |
| | | | ಕೆಜಿಎಫ್ | ಮಾಲೂರು | |
| | | | ಮುಳಬಾಗಿಲು | ಶ್ರೀನಿವಾಸಪುರ | |
| | 6 | 0 | 3 | 3 | 0 |
| | | | | | |
| 6 | ಚಿಕ್ಕಬಳ್ಳಾಪುರ | | ಚಿಕ್ಕಬಳ್ಳಾಪುರ | ಬಾಗೇಪಲ್ಲಿ | ಗುಡಿಬಂಡೆ |
| | | | ಚಿಂತಾಮಣಿ | | |
| | | | ಶಿಡ್ಲಘಟ್ಟ | | |
| | | | ಗೌರಿಬಿದನೂರು | | |
| | 6 | 0 | 4 | 1 | 1 |

| ಕ್ರ.ಸಂ. | ಜಿಲ್ಲೆಯ ಹೆಸರು | ಮಹಾನಗರಪಾಲಿಕೆ | ನಗರಸಭೆ | ಪುರಸಭೆ | ಪಟ್ಟಣ ಪಂಚಾಯಿತಿ |
|---|---|---|---|---|---|
| | | | | | |
| 7 | ಚಿತ್ರದುರ್ಗ | | ಚಿತ್ರದುರ್ಗ | ಹೊಸದುರ್ಗ | ಮೊಳಕಾಲ್ಮೂರು |
| | | | ಚಳ್ಳಕೆರೆ | ಹೊಳಲ್ಕೆರೆ. | ನಾಯಕನಹಟ್ಟಿ |
| | | | ಹಿರಿಯೂರು | | |
| | | | | | |
| | 7 | 0 | 3 | 2 | 2 |
| | | | | | |
| 8 | ದಾವಣಗೆರೆ | ದಾವಣಗೆರೆ | ಹರಿಹರ | ಚನ್ನಗಿರಿ | ಜಗಳೂರು |
| | | | | ಮಲೇಬೆನ್ನೂರು | ನ್ಯಾಮತಿ |
| | | | | ಹೊನ್ನಾಳಿ | |
| | 7 | 1 | 1 | 3 | 2 |
| | | | | | |
| 9 | ಶಿವಮೊಗ್ಗ | ಶಿವಮೊಗ್ಗ | ಭದ್ರಾವತಿ | ಶಿಕಾರಿಪುರ | ತೀರ್ಥಹಳ್ಳಿ |
| | | | ಸಾಗರ | ಶಿರಾಳಕೊಪ್ಪ | ಹೊಸನಗರ |
| | | | | ಸೊರಬ | ಜೋಗ್-ಕಾರ್ಗಲ್ |
| | | | | | ಆನವಟ್ಟಿ |
| | | | | | ಹೊಳೆಹೊನ್ನೂರು |
| | 11 | 1 | 2 | 3 | 5 |
| | | | | | |
| 10 | ಮೈಸೂರು ಜಿಲ್ಲೆ | ಮೈಸೂರು | ಹುಣಸೂರು | ಕೆ.ಆರ್.ನಗರ | ಸರಗೂರು |
| | | | ನಂಜನಗೂಡು | ಬನ್ನೂರು | ರಮ್ಮನಹಳ್ಳಿ |
| | | | ಹೂಟಗಳ್ಳಿ | ಟಿ.ನರಸೀಪುರ | ಕಡಕೊಳ |
| | | | | ಪಿರಿಯಾಪಟ್ಟಣ | ಶ್ರೀರಾಂಪುರ |
| | | | | ಹೆಚ್.ಡಿ.ಕೋಟೆ | ಬೋಗಾದಿ |
| | 14 | 1 | 3 | 5 | 5 |
| | | | | | |
| 11 | ಚಾಮರಾಜನಗರ | | ಚಾಮರಾಜ ನಗರ | ಗುಂಡ್ಲುಪೇಟೆ | ಯಳಂದೂರು |
| | | | ಕೊಳ್ಳೇಗಾಲ | | ಹನೂರು |
| | 5 | 0 | 2 | 1 | 2 |
| | | | | | |
| 12 | ಮಂಡ್ಯ | | ಮಂಡ್ಯ | ಮದ್ದೂರು | ಬೆಳ್ಳೂರು |
| | | | | ಮಳವಳ್ಳಿ | |
| | | | | ಶ್ರೀರಂಗಪಟ್ಟಣ | |
| | | | | ಕೆ.ಆರ್.ಪೇಟೆ | |
| | | | | ಪಾಂಡವಪುರ | |
| | | | | ನಾಗಮಂಗಲ | |
| | 8 | 0 | 1 | 6 | 1 |
| | | | | | |
| 13 | ಹಾಸನ ಜಿಲ್ಲೆ | | ಹಾಸನ | ಬೇಲೂರು | ಅರಕಲಗೂಡು |
| | | | ಅರಸೀಕೆರೆ | ಚನ್ನರಾಯಪಟ್ಟಣ | ಆಲೂರು |
| | | | | ಹೊಳೆನರಸೀಪುರ | |

| ಕ್ರ.ಸಂ. | ಜಿಲ್ಲೆಯ ಹೆಸರು | ಮಹಾನಗರಪಾಲಿಕೆ | ನಗರಸಭೆ | ಪುರಸಭೆ | ಪಟ್ಟಣ ಪಂಚಾಯಿತಿ |
|---|---|---|---|---|---|
| | | | | ಸಕಲೇಶಪುರ | |
| | 8 | 0 | 2 | 4 | 2 |
| | | | | | |
| 14 | ಕೊಡಗು | | ಮಡಿಕೇರಿ | | ಕುಶಾಲನಗರ |
| | | | | | ಸೋಮವಾರ ಪೇಟೆ |
| | | | | | ವಿರಾಜಪೇಟೆ |
| | 4 | 0 | 1 | 0 | 3 |
| | | | | | |
| 15 | ಚಿಕ್ಕಮಗಳೂರು | | ಚಿಕ್ಕಮಗಳೂರು | ಕಡೂರು | ನರಸಿಂಹರಾಜಪುರ |
| | | | | ಬೀರೂರು | ಕೊಪ್ಪ |
| | | | | ತರೀಕೆರೆ | ಶೃಂಗೇರಿ |
| | | | | | ಮೂಡಿಗೆರೆ |
| | | | | | ಅಜ್ಜಂಪುರ |
| | 9 | 0 | 1 | 3 | 5 |
| | | | | | |
| 16 | ದಕ್ಷಿಣ ಕನ್ನಡ | ಮಂಗಳೂರು | ಉಳ್ಳಾಲ | ಬಂಟ್ವಾಳ | ಬೆಳ್ತಂಗಡಿ |
| | | | ಪುತ್ತೂರು | ಮೂಡುಬಿದರೆ | ಸುಳ್ಯ |
| | | | | ಸೋಮೇಶ್ವರ | ಮುಲ್ಕಿ |
| | | | | | ವಿಟ್ಲ |
| | | | | | ಕೋಟೆಕಾರು |
| | | | | | ಕಡಬ |
| | | | | | ಬಜಪೆ |
| | | | | | ಕಿನ್ನಿಗೋಳಿ |
| | 14 | 1 | 2 | 3 | 8 |
| | | | | | |
| 17 | ಉಡುಪಿ | | ಉಡುಪಿ | ಕಾರ್ಕಳ | ಸಾಲಿಗ್ರಾಮ |
| | | | | ಕುಂದಾಪುರ | ಬೈಂದೂರು |
| | | | | ಕಾಪು | |
| | 6 | 0 | 1 | 3 | 2 |
| | | | | | |
| 18 | ಬೆಳಗಾವಿ | ಬೆಳಗಾವಿ | ನಿಪ್ಪಾಣಿ | ಸವದತ್ತಿ | ಖಾನಾಪೂರ |
| | | | ಗೋಕಾಕ | ಸಂಕೇಶ್ವರ | ರಾಯಬಾಗ |
| | | | | ಚಿಕ್ಕೋಡಿ | ಕಂಕನವಾಡಿ |
| | | | | ಬೈಲಹೊಂಗಲ | ಎಂ.ಕೆ.ಹುಬ್ಬಳ್ಳಿ |
| | | | | ರಾಮದುರ್ಗ | ನಾಗನೂರ |
| | | | | ಮೂಡಲಗಿ | ಚಿಂಚಲಿ |
| | | | | ಅಥಣಿ | ಯಕ್ಸಾಂಬ |
| | | | | ಹುಕ್ಕೇರಿ | ಚೆನ್ನಮ್ಮ ಕಿತ್ತೂರ |
| | | | | ಸದಲಗಾ | ಕಲ್ಲೋಳಿ |

| ಕ್ರ.ಸಂ. | ಜಿಲ್ಲೆಯ ಹೆಸರು | ಮಹಾನಗರಪಾಲಿಕೆ | ನಗರಸಭೆ | ಪುರಸಭೆ | ಪಟ್ಟಣ ಪಂಚಾಯಿತಿ |
|---|---|---|---|---|---|
| | | | | ಕುಡಚಿ | ಐನಾಪುರ |
| | | | | ಮುಗಳಖೋಡ | ಶೇಡಬಾಳ |
| | | | | ಮುನವಳ್ಳಿ | ಕಬ್ಬೂರ |
| | | | | ಉಗಾರಖುರ್ದಾ | ಬೋರಗಾಂವ |
| | | | | ಕೊಣ್ಣೂರು | ಅರಂಭಾವಿ |
| | | | | ಹಾರೋಗೇರಿ | ಕಾಗವಾಡ |
| | | | | ಮಲ್ಲಾಪೂರ ಪಿ.ಜಿ. | ಯರಗಟ್ಟಿ |
| | | | | | ಮಚ್ಚೆ |
| | | | | | ಪೀರನವಾಡಿ |
| | | | | | ಅಂಕಲಗಿ–ಅಕ್ಕತಂಗೇರಹಾಳ |
| | 38 | 1 | 2 | 16 | 19 |
| | | | | | |
| 19 | ಉತ್ತರಕನ್ನಡ | | ಕಾರವಾರ | ಭಟ್ಕಳ | ಹೊನ್ನಾವರ |
| | | | ಶಿರಸಿ | ಕುಮಟಾ | ಸಿದ್ದಾಪುರ |
| | | | ದಾಂಡೇಲಿ | ಅಂಕೋಲಾ | ಮುಂಡಗೋಡ |
| | | | | ಹಳಿಯಾಳ | ಯಲ್ಲಾಪುರ |
| | | | | | ಜಾಲಿ |
| | | | | | ಮಂಕಿ |
| | 13 | 0 | 3 | 4 | 6 |
| | | | | | |
| 20 | ವಿಜಯಾಪುರ | ವಿಜಯಾಪುರ | | ಬಸವನ ಬಾಗೇವಾಡಿ | ಅಲಮೇಲ |
| | | | | ಮುದ್ದೇಬಿಹಾಳ | ಮನಗೂಳಿ |
| | | | | ತಾಳಿಕೋಟೆ | ಕೊಲ್ಹಾರ |
| | | | | ಸಿಂದಗಿ | ನಾಲತವಾಡ |
| | | | | ಇಂಡಿ | ನಿಡಗುಂದಿ |
| | | | | | ದೇವರಹಿಪ್ಪರಗಿ |
| | | | | | ಚಡಚಣ |
| | | | | | ತಿಕೋಟಾ |
| | | | | | ಬಬಲೇಶ್ವರ |
| | 15 | 1 | 0 | 5 | 9 |
| | | | | | |
| 21 | ಬಾಗಲಕೋಟೆ | | ಬಾಗಲಕೋಟ | ಮಹಾಲಿಂಗಪೂರ | ಕೆರೂರ |
| | | | ರಬಕವಿ–ಬನಹಟ್ಟಿ | ಗುಳೇದಗುಡ್ಡ | ಬೀಳಗಿ |
| | | | ಜಮಖಂಡಿ | ಬದಾಮಿ | ಅಮೀನಗಡ |
| | | | ಇಲಕಲ್ಲ | ತೇರದಾಳ | ಬೆಳಗಲಿ |
| | | | ಮುಧೋಳ | ಹುನಗುಂದ | ಕಮತಗಿ |
| | | | | | ಲೋಕಾಪುರ |
| | | | | | ಶಿರೂರು |
| | 17 | 0 | 5 | 5 | 7 |
| | | | | | |

| ಕ್ರ.ಸಂ. | ಜಿಲ್ಲೆಯ ಹೆಸರು | ಮಹಾನಗರಪಾಲಿಕೆ | ನಗರಸಭೆ | ಪುರಸಭೆ | ಪಟ್ಟಣ ಪಂಚಾಯಿತಿ |
|---|---|---|---|---|---|
| 22 | ಧಾರವಾಡ | ಹುಬ್ಬಳ್ಳಿ-ಧಾರವಾಡ | | ಅಣ್ಣಿಗೇರಿ | ಅಳ್ನಾವರ |
| | | | | ನವಲಗುಂದ | ಕಲಘಟಗಿ |
| | | | | | ಕುಂದಗೋಳ |
| | | | | | |
| | 6 | 1 | 0 | 2 | 3 |
| | | | | | |
| 23 | ಗದಗ | | ಗದಗ ಬೆಟಗೇರಿ | ಗಜೇಂದ್ರಗಡ | ಮುಳಗುಂದ |
| | | | | ಲಕ್ಷ್ಮೇಶ್ವರ | ನರೇಗಲ್ಲ |
| | | | | ಮುಂಡರಗಿ | ಶಿರಹಟ್ಟಿ |
| | | | | ನರಗುಂದ | |
| | | | | ರೋಣ | |
| | 9 | 0 | 1 | 5 | 3 |
| | | | | | |
| 24 | ಹಾವೇರಿ | | ಹಾವೇರಿ | ಬ್ಯಾಡಗಿ | ಹಿರೇಕೆರೂರು |
| | | | ರಾಣೇಬೆನ್ನೂರ | ಹಾನಗಲ್ಲ | ಗುತ್ತಲ |
| | | | | ಸವಣೂರು | ರಟ್ಟೆಹಳ್ಳಿ |
| | | | | ಶಿಗ್ಗಾಂವ | |
| | | | | ಬಂಕಾಪುರ | |
| | 10 | 0 | 2 | 5 | 3 |
| | | | | | |
| 25 | ಕಲಬುರ್ಗಿ | ಕಲಬುರ್ಗಿ | ಶಹಾಬಾದ | ಆಳಂದ | ಕಾಳಗಿ |
| | | | | ಚಿತ್ತಾಪುರ | ಕಮಲಾಪೂರ |
| | | | | ಸೇಡಂ | ಯಡ್ರಾಮಿ |
| | | | | ವಾಡಿ | |
| | | | | ಅಫಜಲಪೂರ | |
| | | | | ಚಿಂಚೋಳಿ | |
| | | | | ಜೇವರ್ಗಿ | |
| | 12 | 1 | 1 | 7 | 3 |
| | | | | | |
| 26 | ಯಾದಗಿರಿ | | ಯಾದಗಿರಿ | ಗುರುಮಿಟ್ಕಲ್ | ಹುಣಸಗಿ |
| | | | ಶಹಪುರ | ಕಕ್ಕೇರಾ | |
| | | | ಸುರಪುರ | ಕೆಂಭಾವಿ | |
| | | | | | |
| | 7 | 0 | 3 | 3 | 1 |
| | | | | | |
| 27 | ರಾಯಚೂರು | | ರಾಯಚೂರು | ಮಾನವಿ | ಕವಿತಾಳ |
| | | | ಸಿಂಧನೂರು | ದೇವದುರ್ಗ | ತುರುವಿಹಾಳ |
| | | | | ಲಿಂಗಸೂಗೂರು | ಬಳಗನೂರು |
| | | | | ಮುದಗಲ್ಲ | ಸಿರವಾರ |
| | | | | ಮಸ್ಕಿ | ಹಟ್ಟಿ |
| | | | | | ಜಾಲಹಳ್ಳಿ |

| ಕ್ರ.ಸಂ. | ಜಿಲ್ಲೆಯ ಹೆಸರು | ಮಹಾನಗರಪಾಲಿಕೆ | ನಗರಸಭೆ | ಪುರಸಭೆ | ಪಟ್ಟಣ ಪಂಚಾಯಿತಿ |
|---|---|---|---|---|---|
| | 13 | 0 | 2 | 5 | 6 |
| | | | | | |
| **28** | ಕೊಪ್ಪಳ | | ಕೊಪ್ಪಳ | ಕುಷ್ಟಗಿ | ಯಲಬುರ್ಗಾ |
| | | | ಗಂಗಾವತಿ | ಕಾರಟಗಿ | ಕನಕಗಿರಿ |
| | | | | | ಕುಕನೂರ |
| | | | | | ತಾವರಗೇರ |
| | | | | | ಭಾಗ್ಯನಗರ |
| | 9 | 0 | 2 | 2 | 5 |
| | | | | | |
| 29 | ಬೀದರ್ ಜಿಲ್ಲೆ | | ಬೀದರ | ಭಾಲ್ಕಿ | ಔರಾದ |
| | | | ಬಸವಕಲ್ಯಾಣ | ಹುಮನಾಬಾದ | |
| | | | | ಚಿಟಗುಪ್ಪಾ | |
| | | | | ಹಳ್ಳಿಖೇಡ | |
| | 7 | 0 | 2 | 4 | 1 |
| | | | | | |
| **30** | ಬಳ್ಳಾರಿ | ಬಳ್ಳಾರಿ | ಹೊಸಪೇಟೆ | ಹೂವಿನಹಡಗಲಿ | ಕಮಲಾಪುರ |
| | | | ಸಿರುಗುಪ್ಪ | ಕಂಪ್ಲಿ | ಕೂಡ್ಲಿಗಿ |
| | | | | ಸಂಡೂರು | ಕೊಟ್ಟೂರು |
| | | | | ಕುರೇಕುಪ್ಪ | ತೆಕ್ಕಲಕೋಟೆ |
| | | | | ಕುರುಗೋಡು | ಕುಡುತಿನಿ |
| | | | | ಹಗರಿಬೊಮ್ಮನಹಳ್ಳಿ | ಮರಿಯಮ್ಮನಹಳ್ಳಿ |
| | | | | ಹರಪನಹಳ್ಳಿ | |
| | 15 | 1 | 2 | 7 | 6 |
| | ಒಟ್ಟು | **10** | **61** | **123** | **117** |

ಕೋನಪ್ಪನ ಅಗ್ರಹಾರ, ದೊಡ್ಡತೋಗೂರು, ಹೂಟಗಳ್ಳಿ : ಈ ಸ್ಥಳೀಯ ಸಂಸ್ಥೆಗಳ ಅಧಿಸೂಚನೆಗಳಿಗೆ ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿ ತಡೆಯಾಜ್ಞೆ ಇರುತ್ತದೆ & ಕೋಲಾರ ಜಿಲ್ಲೆಯ ವೇಮಗಲ್-ಕುರುಗಲ್ ಪಟ್ಟಣ ಪಂಚಾಯಿತಿಯನ್ನಾಗಿ ಮೇಲ್ದರ್ಜೆಗೇರಿಸಿ ಪ್ರಕಟಿಸಿದ್ದ ಅಂತಿಮ ಅಧಿಸೂಚನೆಯನ್ನು ಮಾನ್ಯ ಉಚ್ಚ ನ್ಯಾಯಾಲಯ, ಬೆಂಗಳೂರು ಇಲ್ಲಿನ ತೀರ್ಪಿನನ್ವಯ, ಹಿಂಪಡೆಯಲಾಗಿದೆ.

ಅನುಬಂಧ - ೨


# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ - ೪ಎ | [illegible] | ಸಂ.೧೯೨ |
| Part – IVA | BENGALURU, THURSDAY, 18, FEBRUARY, 2021 (Magha, 29, SHAKAVARSHA, 1942) | No. 192 |


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 07 SHASANA 2021, BENGALURU, DATED:18.02.2021**

**The Karnataka Municipal Corporations (Amendment) Bill, 2021 ಇದಕ್ಕೆ 2021ರ ಫೆಬ್ರವರಿ ತಿಂಗಳ 17ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 04 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.**

## KARNATAKA ACT NO 04 OF 2021

(First published in the Karnataka Gazette Extra-ordinary on the 18th day of February, 2021)

## THE KARNATAKA MUNICIPAL CORPORATIONS (AMENDMENT) ACT, 2021

(Received the assent of the Governor on the 17th day of February, 2021)

An Act further to amend the Karnataka Municipal Corporations Act, 1976.

Whereas it is expedient further to amend the Karnataka Municipal Corporations Act, 1976 (Karnataka Act 14 of 1977) for the purposes hereinafter appearing;

Be it enacted by the Karnataka State Legislature in the seventy second year of the Republic of India as follows, namely:-

**1. Short title and commencement.–** (1) This Act may be called the Karnataka Municipal Corporations (Amendment) Act, 2021.

(2) It shall be deemed to have come into force with effect from the 19th day of January, 2021.

**2. Amendment of section 108.-** In the Karnataka Municipal Corporations Act, 1976 (Karnataka Act 14 of 1977) (hereinafter referred to as the principal Act), in section 108,

(i) in sub-section (2),-

(a) in clause (b), for the figures, words and brackets "0.3 percent (rupees three per thousand)" and "one percent (rupees ten per thousand)", the figures,

words and brackets "0.2 percent (rupees two per thousand)" and "1.5 percent (rupees fifteen per thousand" shall respectively be substituted.

(b) in clause (c),-

(i) after the words "Vacant land", the words, figures and brackets, "at such percentage not being less than 0.2 percent (rupees two per thousand) and not more than 0.5 percent (rupees five per thousand) of taxable capital value of land" shall be inserted; and

(ii) the sub clauses (i), (ii) and (iii) shall be omitted.

(ii) in sub-section (3), for the second proviso, the following shall be substituted, namely:-

"Provided further that, the vacant land appurtenant to the building, up to one thousand square feet shall be exempted and more than one thousand square feet shall be levied with property tax on vacant land in accordance with clause (c) of sub-section (2)."

**3. Amendment of section 109.**- In section 109 of the principal Act,

(i) in sub-section (1), for the words "fifty percent of the market value guidelines", the words "twenty five percent of the prevailing market value guidelines" shall be substituted.

(ii) in sub-section (2), for the words "fifty percent of the market value guidelines", the words "twenty five percent of the prevailing market value guidelines" shall be substituted.

**4. Amendment of section 109A.**- For section 109A of the principal Act, the following shall be substituted, namely:-

"**109A. Enhancement of property tax.**- (1) Notwithstanding anything contained in section 108 and 109 the property tax assessed and levied under either provision shall be assessed in year of revision of guidance value of property under section 45B of the Karnataka Stamps Act, 1957.

(2) The property tax shall stand enhanced by three percent for every financial year in which no revision of guidance value is made.

Provided that, the Municipal Corporation may enhance such property tax up to five percent for every financial year and different rate of enhancement may be made to different areas and different classes of buildings and lands.

Provided further that, nothing contained in this section shall be deemed to affect the power of State Government to direct an earlier revision of property tax.

**Explanation:** "Financial year" shall mean the year commencing on the first day of April."

**5. Repeal and savings.**- (1) The Karnataka Municipal Corporations (Amendment) Ordinance, 2021 (Karnataka Ordinance 03 of 2021) is hereby repealed.

(2) Notwithstanding such repeal, anything done or any action taken under the principal Act, as amended by the said Ordinance, shall be deemed to have been done or taken under principal Act, as amended by this Act.

By Order and in the name of
**the Governor of Karnataka,**

**(K. DWARAKANATH BABU)**
Secretary to Government
Department of Parliamentary Affairs
and Legislation

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಂವ್ಯಶಾಇ 07 ಶಾಸನ 2021, ಬೆಂಗಳೂರು, ದಿನಾಂಕ:18.02.2021

The Karnataka Official Language Act, 1963 (Karnataka Act 26 of 1963) ರ ಪ್ರಕರಣ 5-ಎ ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ The Karnataka Municipal Corporations (Amendment) Act, 2021 (Karnataka Act 04 of 2021) ನ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

2021 ರ **ಕರ್ನಾಟಕ ಅಧಿನಿಯಮ ಸಂಖ್ಯೆ**: 04

(2021 ರ ಫೆಬ್ರವರಿ ತಿಂಗಳ 18ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ಅಧಿನಿಯಮ**, 2021

(2021 ರ ಫೆಬ್ರವರಿ ತಿಂಗಳ 17ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು, ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ನ್ನು (1977ರ ಕರ್ನಾಟಕ ಅಧಿನಿಯಮ 14) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ**.- (1) ಈ ಅಧಿನಿಯಮವನ್ನು ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು 19ನೇ ಜನವರಿ 2021ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **108ನೇ ಪ್ರಕರಣದ ತಿದ್ದುಪಡಿ**.- ಕರ್ನಾಟಕ ನಗರಪಾಲಿಕೆಗಳ ಅಧಿನಿಯಮ, 1976ರ (1977ರ ಕರ್ನಾಟಕ ಅಧಿನಿಯಮ 14) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 108ನೇ ಪ್ರಕರಣದಲ್ಲಿ,-

(i) (2)ನೇ ಉಪಪ್ರಕರಣದಲ್ಲಿ,-

(ಎ) (ಬಿ) ಖಂಡದಲ್ಲಿ, "ಶೇಕಡಾ 0.3 ಕ್ಕಿಂತ (ಒಂದು ಸಾವಿರಕ್ಕೆ ಮೂರು ರೂಪಾಯಿಗಳು)" ಮತ್ತು "ಶೇಕಡಾ ಒಂದಕ್ಕಿಂತ (ಒಂದು ಸಾವಿರಕ್ಕೆ ಹತ್ತು ರೂಪಾಯಿಗಳು)" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳಿಗೆ "ಶೇಕಡಾ 0.2 ಕ್ಕಿಂತ (ಒಂದು ಸಾವಿರಕ್ಕೆ ಎರಡು ರೂಪಾಯಿಗಳು)" ಮತ್ತು "ಶೇಕಡಾ 1.5ಕ್ಕಿಂತ (ಒಂದು ಸಾವಿರಕ್ಕೆ ಹದಿನೈದು ರೂಪಾಯಿಗಳು)" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

(ಬಿ) (ಸಿ) ಖಂಡದಲ್ಲಿ,-

(i) (ಸಿ) ಖಂಡಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಸಿ) ಖಾಲಿ ಭೂಮಿಯ ಸಂಬಂಧದಲ್ಲಿ ತೆರಿಗೆಗೆ ಗುರಿಯಾಗತಕ್ಕ ಭೂಮಿಯ ಬಂಡವಾಳ ಮೌಲ್ಯದ ಶೇಕಡಾ 0.2 ಕ್ಕಿಂತ (ಒಂದು ಸಾವಿರಕ್ಕೆ ಎರಡು ರೂಪಾಯಿಗಳು) ಕಡಿಮೆ ಇಲ್ಲದ ಮತ್ತು ಶೇಕಡಾ 0.5ಕ್ಕಿಂತ (ಒಂದು ಸಾವಿರಕ್ಕೆ ಐದು ರೂಪಾಯಿಗಳು) ಹೆಚ್ಚಿಲ್ಲದಂಥ ಶೇಕಡಾ ಪ್ರಮಾಣದಲ್ಲಿ ವಿಧಿಸತಕ್ಕದ್ದು."

(ii) (i), (ii) ಮತ್ತು (iii)ನೇ ಉಪಖಂಡಗಳನ್ನು ಬಿಟ್ಟುಬಿಡತಕ್ಕದ್ದು.

(ii) (3)ನೇ ಉಪಪ್ರಕರಣದಲ್ಲಿ ಎರಡನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಕಟ್ಟಡಕ್ಕೆ ಹೊಂದಿಕೊಂಡಿರುವ ಒಂದು ಸಾವಿರ ಚದರಡಿಯವರೆಗಿನ ಖಾಲಿ ಭೂಮಿಗೆ ವಿನಾಯತಿಯನ್ನು ನೀಡತಕ್ಕದ್ದು ಮತ್ತು ಒಂದು ಸಾವಿರ ಚದರಡಿಗಿಂತ ಹೆಚ್ಚಿರುವ ಖಾಲಿ ಭೂಮಿಗೆ (2)ನೇ ಉಪಪ್ರಕರಣದ (ಸಿ) ಖಂಡದ ಅನುಸಾರವಾಗಿ ಸ್ವತ್ತು ತೆರಿಗೆಯನ್ನು ವಿಧಿಸತಕ್ಕದ್ದು."

3. **109ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 109ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ, "ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಗಳ ಶೇಕಡಾ ಐವತ್ತಕ್ಕೆ" ಎಂಬ ಪದಗಳಿಗೆ "ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯದ ಶೇಕಡ ಇಪ್ಪತ್ತೈದಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ii) (2)ನೇ ಉಪಪ್ರಕರಣದಲ್ಲಿ "ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಗಳ ಶೇಕಡಾ ಐವತ್ತಕ್ಕೆ" ಎಂಬ ಪದಗಳಿಗೆ "ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯದ ಶೇಕಡ ಇಪ್ಪತ್ತೈದಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

4. **109ಎ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 109ಎ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"109ಎ. **ಸ್ವತ್ತು ತೆರಿಗೆಯನ್ನು ಹೆಚ್ಚಿಸುವುದು.**- (1) 108 ಮತ್ತು 109ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅವುಗಳಲ್ಲಿನ ಯಾವುದೇ ಉಪಬಂಧದ ಅಡಿಯಲ್ಲಿ ನಿರ್ಧರಣೆ ಮಾಡಿದ ಮತ್ತು ವಿಧಿಸಿದ ಸ್ವತ್ತು ತೆರಿಗೆಯನ್ನು ಕರ್ನಾಟಕ ಸ್ಟಾಂಪುಗಳ ಅಧಿನಿಯಮ, 1957ರ 45ಬಿ ಪ್ರಕರಣದ ಅಡಿಯಲ್ಲಿ ಸ್ವತ್ತಿನ ಮಾರ್ಗಸೂಚಿ ಮೌಲ್ಯದ ಪರಿಷ್ಕರಣೆಯ ವರ್ಷದಲ್ಲಿ ನಿರ್ಧರಣೆ ಮಾಡತಕ್ಕದ್ದು.

(2) ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ ಮೂರರಷ್ಟು ಆಸ್ತಿ ತೆರಿಗೆಯು ಹೆಚ್ಚಳವಾಗತಕ್ಕದ್ದು, ಅದರಲ್ಲಿ ಮಾರ್ಗಸೂಚಿ ಮೌಲ್ಯದ ಪರಿಷ್ಕರಣೆ ಮಾಡತಕ್ಕದ್ದಲ್ಲ:

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297



ಪರಂತು, ನಗರಪಾಲಿಕೆಯು, ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ ಐದರಷ್ಟರ ಮಟ್ಟಿಗೆ ಅಂಥ ಸ್ವತ್ತು ತೆರಿಗೆಯನ್ನು ಹೆಚ್ಚಿಸಬಹುದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಹಾಗೂ ಬೇರೆ ಬೇರೆ ಕಟ್ಟಡಗಳು ಮತ್ತು ಭೂಮಿಗಳ ವರ್ಗಗಳಿಗೆ ಬೇರೆ ಬೇರೆ ದರಗಳ ಹೆಚ್ಚಳವನ್ನು ಮಾಡಬಹುದು:

ಮತ್ತೂ ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಸ್ವತ್ತು ತೆರಿಗೆಯನ್ನು ಇನ್ನೂ ಮುಂಚಿತವಾಗಿ ಪರಿಷ್ಕರಿಸುವಂತೆ ನಿರ್ದೇಶನ ನೀಡಲು ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರಕ್ಕೆ ಬಾಧಕ ಉಂಟು ಮಾಡುತ್ತದೆ ಎಂದು ಭಾವಿಸತಕ್ಕದಲ್ಲ.

**ವಿವರಣೆ**: "ಹಣಕಾಸು ವರ್ಷ" ಎಂದರೆ ಏಪ್ರಿಲ್ ತಿಂಗಳ ಮೊದಲನೇ ದಿನಾಂಕದಿಂದ ಪ್ರಾರಂಭವಾಗುವ ವರ್ಷ"

5. **ನಿರಸನ ಮತ್ತು ಉಳಿಸುವಿಕೆಗಳು**.- (1) ಕರ್ನಾಟಕ ನಗರ ಪಾಲಿಕೆಗಳ (ತಿದ್ದುಪಡಿ) ಅಧ್ಯಾದೇಶ, 2021ನ್ನು (2021ರ ಕರ್ನಾಟಕ ಅಧ್ಯಾದೇಶ 03) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಅದನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

The above translation of the Karnataka Municipal Corporations (Amendment) Act, 2021 (Karnataka Act 04 of 2021) shall be authoritative text in Kannada language under section-5 A of the Karnataka Official Language Act, 1963 (Karnataka Act 26 of 1963).

**ವಜೂಭಾಯಿ ವಾಲಾ**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.

SUNIL GARDE

# ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

| | | |
|---|---|---|
| ಭಾಗ - ೪ಎ | ಬೆಂಗಳೂರು, ಗುರುವಾರ, ೧೮, ಫೆಬ್ರವರಿ, ೨೦೨೧ (ಮಾಘ, ೨೯, ಶಕವರ್ಷ, ೧೯೪೨) | ನಂ.೧೯೧ |
| Part – IVA | BENGALURU, THURSDAY, 18, FEBRUARY, 2021 (Magha, 29, SHAKAVARSHA, 1942) | No. 191 |


**DEPARTMENT OF PARLIAMENTARY AFFAIRS AND LEGISLATION SECRETARIAT**

**NOTIFICATION**

**NO: DPAL 06 SHASANA 2021, BENGALURU, DATED: 18.02.2021**

**The Karnataka Municipalities (Second Amendment) Bill, 2021** ಇದಕ್ಕೆ 2021ರ ಫೆಬ್ರವರಿ ತಿಂಗಳ 17ನೇ ದಿನಾಂಕದಂದು ರಾಜ್ಯಪಾಲರ ಒಪ್ಪಿಗೆ ದೊರೆತಿದ್ದು, ಸಾಮಾನ್ಯ ತಿಳುವಳಿಕೆಗಾಗಿ ಇದನ್ನು 2021ರ ಕರ್ನಾಟಕ ಅಧಿನಿಯಮ ಸಂಖ್ಯೆ: 03 ಎಂಬುದಾಗಿ ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

## KARNATAKA ACT NO 03 OF 2021

(First published in the Karnataka Gazette Extra-ordinary on the 18th day of February, 2021)

## THE KARNATAKA MUNICIPALITIES (SECOND AMENDMENT) ACT, 2021

(Received the assent of the Governor on the 17th day of February, 2021)

An Act further to amend the Karnataka Municipalities Act, 1964.

Whereas it is expedient further to amend the Karnataka Municipalities Act, 1964 (Karnataka Act 22 of 1964) for the purposes hereinafter appearing;

Be it enacted by the Karnataka State Legislature in the seventy second year of the Republic of India as follows:-

**1. Short title and commencement.–** (1) This Act may be called the Karnataka Municipalities (Second Amendment) Act, 2021.

(2) It shall be deemed to have come into force with effect from the 19th day of January, 2021.

**2. Amendment of section 101.-** In the Karnataka Municipalities Act, 1964 (Karnataka Act 22 of 1964) (hereinafter referred to as the principal Act), in section 101,-

(i) in sub-section (2),-

(a) in clause (b), for the figures, words and brackets "0.3 percent (rupees three per thousand)" and "one percent (rupees ten per thousand)", the figures, words and brackets "0.2 percent (rupees two per thousand)" and "1.5 percent (rupees fifteen per thousand)" shall respectively be substituted.

(b) in clause (c),-

(i) the words "measuring not above one thousand square meters" shall be omitted ; and

(ii) for the figures, words and brackets "0.1 percent (rupees one per thousand)" the figures, words and brackets "0.2 percent (rupees two per thousand)" shall be substituted.

(c) clause (d) and (e) shall be omitted.

(ii) in sub-section (3), for the second proviso, the following shall be substituted, namely:-

"Provided further that, the vacant land appurtenant to the building, up to one thousand square feet shall be exempted and more than one thousand square feet shall be levied with property tax on vacant land in accordance with clause (c) of sub-section (2)."

**3. Amendment of section 102.-** In section 102 of the principal Act,

(i) in sub-section (1),-

(a) after the words "having regard to the", the word "prevailing" shall be inserted; and

(b) for the words "fifty percent of the market value guidelines", the words "twenty five percent of the prevailing market value guidelines" shall be substituted.

(ii) in sub-section (2), for the words "fifty percent of the market value guidelines", the words "twenty five percent of the prevailing market value guidelines" shall be substituted.

**4. Substitution of section 102A.-** For section 102A of the principal Act, the following shall be substituted, namely:-

"**102A. Enhancement of property tax.-** (1) Notwithstanding anything contained in section 101 and 102 the property tax assessed and levied under either provision shall be assessed in year of revision of guidance value of property under section 45B of the Karnataka Stamps Act, 1957.

(2) The property tax shall stand enhanced by three percent for every financial year in which no revision of guidance value is made:

Provided that, the Municipal Council may enhance such property tax up to five percent for every financial year and different rate of enhancement may be made to different areas and different classes of buildings and lands.

Provided further that, nothing contained in this section shall be deemed to affect the power of the State Government to direct an earlier revision of property tax.

**Explanation:** "Financial year" shall mean the year commencing on the first day of April."

**5. Repeal and savings.-** (1) The Karnataka Municipalities (Amendment) Ordinance, 2021 (Karnataka Ordinance 02 of 2021) is hereby repealed.

(2) Notwithstanding such repeal, anything done or any action taken under the principal Act, as amended by the said Ordinance, shall be deemed to have been done or taken under principal Act, as amended by this Act.

By Order and in the name of
**the Governor of Karnataka,**

**(K. DWARAKANATH BABU)**
Secretary to Government
Department of Parliamentary Affairs
and Legislation

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಸಚಿವಾಲಯ**

**ಅಧಿಸೂಚನೆ**

**ಸಂಖ್ಯೆ: ಸಂವ್ಯಶಾಇ 06 ಶಾಸನ 2021, ಬೆಂಗಳೂರು, ದಿನಾಂಕ:18.02.2021**

The Karnataka Official Language Act, 1963 (Karnataka Act 26 of 1963) ರ ಪ್ರಕರಣ 5-ಎ ರಡಿಯಲ್ಲಿ ರಾಜ್ಯಪಾಲರಿಂದ ಅಧಿಕೃತಗೊಳಿಸಿದ the Karnataka Municipalities (Second Amendment) Act, 2021 (Karnataka Act 03 of 2021) ನ ಭಾಷಾಂತರವನ್ನು ಅಧಿಕೃತ ಕನ್ನಡ ಪಠ್ಯವೆಂದು ಕರ್ನಾಟಕ ರಾಜ್ಯಪತ್ರದಲ್ಲಿ (ಭಾಗ IV) ಪ್ರಕಟಿಸಬೇಕೆಂದು ಆದೇಶಿಸಲಾಗಿದೆ.

**2021 ರ ಕರ್ನಾಟಕ ಅಧಿನಿಯಮ ಸಂಖ್ಯೆ: 03**

(2021 ರ ಫೆಬ್ರವರಿ ತಿಂಗಳ 18ನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

**ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2021**

(2021 ರ ಫೆಬ್ರವರಿ ತಿಂಗಳ 17 ನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು ಮತ್ತಷ್ಟು ತಿದ್ದುಪಡಿ ಮಾಡುವುದಕ್ಕಾಗಿ ಒಂದು ಅಧಿನಿಯಮ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ನ್ನು (1964ರ ಕರ್ನಾಟಕ ಅಧಿನಿಯಮ 22) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

1. **ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ**.- (1) ಈ ಅಧಿನಿಯಮವನ್ನು ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ಅಧಿನಿಯಮ, 2021 ಎಂದು ಕರೆಯತಕ್ಕದ್ದು.

(2) ಇದು 19ನೇ ಜನವರಿ 2021ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. **101ನೇ ಪ್ರಕರಣದ ತಿದ್ದುಪಡಿ**.- ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ (1964ರ ಕರ್ನಾಟಕ ಅಧಿನಿಯಮ 22) (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ) 101ನೇ ಪ್ರಕರಣದಲ್ಲಿ,-

(i) (2)ನೇ ಉಪಪ್ರಕರಣದಲ್ಲಿ,-

(ಎ) (ಬಿ) ಖಂಡದಲ್ಲಿ, "ಶೇಕಡಾ 0.3 ಕ್ಕಿಂತ (ಒಂದು ಸಾವಿರಕ್ಕೆ ಮೂರು ರೂಪಾಯಿಗಳು)" ಮತ್ತು "ಶೇಕಡಾ ಒಂದಕ್ಕಿಂತ (ಒಂದು ಸಾವಿರಕ್ಕೆ ಹತ್ತು ರೂಪಾಯಿಗಳು)" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳಿಗೆ "ಶೇಕಡಾ 0.2 ಕ್ಕಿಂತ (ಒಂದು ಸಾವಿರಕ್ಕೆ ಎರಡು ರೂಪಾಯಿಗಳು)" ಮತ್ತು "ಶೇಕಡಾ 1.5ಕ್ಕಿಂತ (ಒಂದು ಸಾವಿರಕ್ಕೆ ಹದಿನೈದು ರೂಪಾಯಿಗಳು)" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಅನುಕ್ರಮವಾಗಿ ಪ್ರತಿಯೋಜಿಸತಕ್ಕದ್ದು.

(ಬಿ) (ಸಿ) ಖಂಡದಲ್ಲಿ,-

(i) "ಒಂದು ಸಾವಿರ ಚದರ ಮೀಟರಿಗಿಂತ ಹೆಚ್ಚಿಲ್ಲದ ಅಳತೆಯ" ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ii) "ಶೇಕಡಾ 0.1 ಕ್ಕಿಂತ (ಸಾವಿರಕ್ಕೆ ಒಂದು ರೂಪಾಯಿಗಳು)" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳಿಗೆ "ಶೇಕಡಾ 0.2 ಕ್ಕಿಂತ (ಸಾವಿರಕ್ಕೆ ಎರಡು ರೂಪಾಯಿಗಳು)" ಎಂಬ ಪದಗಳು, ಅಂಕಿಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

(ಸಿ) (ಡಿ) ಮತ್ತು (ಇ) ಖಂಡಗಳನ್ನು ಬಿಟ್ಟುಬಿಡತಕ್ಕದ್ದು.

(ii) (3)ನೇ ಉಪಪ್ರಕರಣದಲ್ಲಿ, ಎರಡನೇ ಪರಂತುಕಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"ಮತ್ತು ಪರಂತು ಕಟ್ಟಡಕ್ಕೆ ಹೊಂದಿಕೊಂಡಿರುವ ಒಂದು ಸಾವಿರ ಚದರಡಿಯವರೆಗಿನ ಖಾಲಿ ಭೂಮಿಗೆ ವಿನಾಯತಿಯನ್ನು ನೀಡತಕ್ಕದ್ದು ಮತ್ತು ಒಂದು ಸಾವಿರ ಚದರಡಿಗಿಂತ ಹೆಚ್ಚಿರುವ ಖಾಲಿ ಭೂಮಿಗೆ (2)ನೇ ಉಪಪ್ರಕರಣದ (ಸಿ) ಖಂಡದ ಅನುಸಾರವಾಗಿ ಸ್ವತ್ತು ತೆರಿಗೆಯನ್ನು ವಿಧಿಸತಕ್ಕದ್ದು."

3. **102ನೇ ಪ್ರಕರಣದ ತಿದ್ದುಪಡಿ**.- ಮೂಲ ಅಧಿನಿಯಮದ 102ನೇ ಪ್ರಕರಣದಲ್ಲಿ,-

(i) (1)ನೇ ಉಪಪ್ರಕರಣದಲ್ಲಿ,-

(ಎ) "ಪ್ರಕಟಿಸಲಾದ ಸ್ವತ್ತಿನ" ಎಂಬ ಪದಗಳ ತರುವಾಯ "ಚಾಲ್ತಿಯಲ್ಲಿರುವ" ಎಂಬ ಪದಗಳನ್ನು ಸೇರಿಸತಕ್ಕದ್ದು;

(ಬಿ) "ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಗಳನ್ನು ಶೇಕಡಾ ಐವತ್ತಕ್ಕೆ" ಎಂಬ ಪದಗಳಿಗೆ "ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯದ ಶೇಕಡ ಇಪ್ಪತ್ತೈದಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(ii) (2)ನೇ ಉಪಪ್ರಕರಣದಲ್ಲಿ "ಮಾರುಕಟ್ಟೆ ಮೌಲ್ಯದ ಮಾರ್ಗಸೂಚಿಗಳನ್ನು ಶೇಕಡಾ ಐವತ್ತಕ್ಕೆ" ಎಂಬ ಪದಗಳಿಗೆ "ಚಾಲ್ತಿಯಲ್ಲಿರುವ ಮಾರುಕಟ್ಟೆ ಮಾರ್ಗಸೂಚಿ ಮೌಲ್ಯದ ಶೇಕಡಾ ಇಪ್ಪತ್ತೈದಕ್ಕೆ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

R.N.I. No. KARBIL/2001/47147, POSTAL REGN. No. [illegible]
Licensed to post without prepayment WPP No. 297



4. **102ಎ ಪ್ರಕರಣದ ತಿದ್ದುಪಡಿ.-** ಮೂಲ ಅಧಿನಿಯಮದ 102ಎ ಪ್ರಕರಣಕ್ಕೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"**102ಎ. ಸ್ವತ್ತು ತೆರಿಗೆಯನ್ನು ಹೆಚ್ಚಿಸುವುದು.-** 101 ಮತ್ತು 102ನೇ ಪ್ರಕರಣದಲ್ಲಿ ಏನೇ ಒಳಗೊಂಡಿದ್ದರೂ, ಅವುಗಳಲ್ಲಿ ಯಾವುದೇ ಉಪಬಂಧದ ಅಡಿಯಲ್ಲಿ ನಿರ್ಧರಣೆ ಮಾಡಿದ ಮತ್ತು ವಿಧಿಸಿದ ಸ್ವತ್ತು ತೆರಿಗೆಯನ್ನು ಕರ್ನಾಟಕ ಸ್ಟಾಂಪುಗಳ ಅಧಿನಿಯಮ, 1957ರ 45ಬಿ ಪ್ರಕರಣದ ಅಡಿಯಲ್ಲಿ ಸ್ವತ್ತಿನ ಮಾರ್ಗಸೂಚಿ ಮೌಲ್ಯದ ಪರಿಷ್ಕರಣೆಯ ವರ್ಷದಲ್ಲಿ ನಿರ್ಧರಣೆ ಮಾಡತಕ್ಕದ್ದು.

(2) ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ ಮೂರರಷ್ಟು ಆಸ್ತಿ ತೆರಿಗೆಯು ಹೆಚ್ಚಳವಾಗತಕ್ಕದ್ದು, ಅದರಲ್ಲಿ ಮಾರ್ಗಸೂಚಿ ಮೌಲ್ಯದ ಪರಿಷ್ಕರಣೆ ಮಾಡತಕ್ಕದ್ದಲ್ಲ:

ಪರಂತು, ಪೌರನಿಗಮವು, ಪ್ರತಿ ಹಣಕಾಸು ವರ್ಷಕ್ಕೆ ಶೇಕಡಾ ಐದಕ್ಕಿಂತ ಹೆಚ್ಚಲ್ಲದಷ್ಟು ಅಂಥ ಸ್ವತ್ತು ತೆರಿಗೆಯನ್ನು ಹೆಚ್ಚಿಸಬಹುದು ಮತ್ತು ಬೇರೆ ಬೇರೆ ಪ್ರದೇಶಗಳಿಗೆ ಹಾಗೂ ಬೇರೆ ಬೇರೆ ಕಟ್ಟಡಗಳು ಮತ್ತು ಭೂಮಿಗಳ ವರ್ಗಗಳಿಗೆ ಬೇರೆ ಬೇರೆ ದರಗಳ ಹೆಚ್ಚಳವನ್ನು ಮಾಡಬಹುದು:

ಮತ್ತೂ ಪರಂತು, ಈ ಪ್ರಕರಣದಲ್ಲಿ ಒಳಗೊಂಡಿರುವುದು ಯಾವುದೂ, ಸ್ವತ್ತು ತೆರಿಗೆಯನ್ನು ಇನ್ನೂ ಮುಂಚಿತವಾಗಿ ಪರಿಷ್ಕರಿಸುವಂತೆ ನಿರ್ದೇಶನ ನೀಡಲು ರಾಜ್ಯ ಸರ್ಕಾರಕ್ಕೆ ಇರುವ ಅಧಿಕಾರಕ್ಕೆ ಬಾಧಕ ಉಂಟು ಮಾಡುತ್ತದೆ ಎಂದು ಭಾವಿಸತಕ್ಕದಲ್ಲ.

**ವಿವರಣೆ:** "ಹಣಕಾಸು ವರ್ಷ" ಎಂದರೆ ಏಪ್ರಿಲ್ ಒಂದನೇ ದಿನಾಂಕದಿಂದ ಪ್ರಾರಂಭವಾಗುವ ವರ್ಷ"

5. **ನಿರಸನ ಮತ್ತು ಉಳಿಸುವಿಕೆಗಳು.-** (1) ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ಅಧ್ಯಾದೇಶ, 2021ನ್ನು, (2021ರ ಕರ್ನಾಟಕ ಅಧ್ಯಾದೇಶ 02) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಅಂಥ ನಿರಸನವು ಏನೇ ಒಳಗೊಂಡಿದ್ದರೂ ಸದರಿ ಅಧ್ಯಾದೇಶದ ಮೂಲಕ ತಿದ್ದುಪಡಿಯಾದಂತೆ ಮೂಲ ಅಧಿನಿಯಮದ ಅಡಿಯಲ್ಲಿ ಏನೇ ಮಾಡಿದ್ದರೂ ಅಥವಾ ಯಾವುದೇ ಕ್ರಮವನ್ನು ಕೈಗೊಂಡಿದ್ದರೂ ಈ ಅಧಿನಿಯಮದ ಅಡಿಯಲ್ಲಿ ತಿದ್ದುಪಡಿಯಾದಂತೆ ಅದನ್ನು ಮೂಲ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

The above translation of the Karnataka Municipalities (Second Amendment) Act, 2021(Karnataka Act 03 of 2021) shall be authoritative text in Kannada language under section-5 A of the Karnataka Official Language Act, 1963 (Karnataka Act 26 of 1963).

**ವಜೂಭಾಯಿ ವಾಲಾ**
**ಕರ್ನಾಟಕದ ರಾಜ್ಯಪಾಲರು**

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಕೆ. ದ್ವಾರಕನಾಥ್ ಬಾಬು)**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಇಲಾಖೆ.

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು
SUNIL GARDE